ಅಸಲು ದಾವೆ ನಂ.46/2016

ಡಿ.ಡಬ್ಲೂಃ 6- ವೆಂಕಟರಾಮ ಬಿನ್ ಬತ್ಯಪ್ಪ

ದಿನಾಂಕಃ 09/10/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಎನ್.ಎಂ. ವಕೀಲರಿಂದ**

1. 5 ನೇ ಪ್ರತಿವಾದಿಯು ಯಾವ ಕಾರಣಕ್ಕಾಗಿ ಸ್ವತಃ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಮತ್ತು ಅವರು ನನಗೆ ಯಾಕೆ ಜಿಪಿಕೆ ಕೊಟ್ಟಿರುತ್ತಾರೆ ಎಂದು ನಿಡಿ-41 ಜಿಪಿಎ ದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ನಿಡಿ-41 ಜಿಪಿಎ ನ್ನು 5 ನೇ ಪ್ರತಿವಾದಿಯು ನನಗೆ ಯಾವತ್ತೂ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.16 ಸ್ವತ್ತನ್ನು 5 ನೇ ಪ್ರತಿವಾದಿಗೆ 1 ನೇ ಪ್ರತಿವಾದಿಯು ಮಾರಾಟ ಮಾಡಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಐಟಂ ನಂ.16 ಸ್ವತ್ತನ್ನು 5 ನೇ ಪ್ರತಿವಾದಿಗೆ 1 ಮತ್ತು 2 ನೇ ಪ್ರತಿವಾದಿಯರು ಸೇರಿ ಮಾರಾಟ ಮಾಡಿರುತ್ತಾರೆ ಎಂದು ಬರೆಯಿಸಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತಿನ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ನಂತರ 5 ನೇ ಪ್ರತಿವಾದಿಯು ಅದನ್ನು ಖರೀದಿಸಿರುತ್ತಾರೆ. ಆಗ 5 ನೇ ಪ್ರತಿವಾದಿಯು ಸದರಿ ಸ್ವತ್ತಿನ ಖಾತಾ ನಕಲನ್ನು ಪರಿಶೀಲಿಸಿದ್ದರು. ಆ ಸಮಯದಲ್ಲಿ 5 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಂಶವೃಕ್ಷವನ್ನು ಪರಿಶೀಲಿಸಿರುವುದಿಲ್ಲ. 5 ನೇ ಪ್ರತಿವಾದಿಯು ಪರಿಶೀಲಿಸಿದ್ದ ಖಾತಾ ನಕಲನ್ನು ಅವರು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ.

2. ದಾವಾ ಐಟಂ ನಂ.16 ಸ್ವತ್ತು 1 ನೇ ಪ್ರತಿವಾದಿಯ ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಹೊರತು ಅವರ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದ ಕಾರಣ ಸಂಬಂಧಪಟ್ಟ ಪಂಚಾಯ್ತಿಯವರು ಅದನ್ನು ಅವರ ಹೆಸರಿಗೆ ದಾಖಲು ಮಾಡಿ ಅವರಿಗೆ ಕೊಟ್ಟ ಸ್ವತ್ತಾಗಿರುತ್ತದೆ ಎಂದರೆ ಸರಿ. ಆ ಕಾರಣಕ್ಕಾಗಿ 5 ನೇ ಪ್ರತಿವಾದಿಯು ನಿಡಿ-42 ಕ್ರಯ ಪತ್ರದಲ್ಲಿ ದಾವಾ ಐಟಂ ನಂ.16 ಸ್ವತ್ತು 1 ನೇ ಪ್ರತಿವಾದಿಯ ಒಟ್ಟು ಕುಟುಂಬದ ಸ್ವತ್ತು ಆಗಿರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ.

3. 5 ನೇ ಪ್ರತಿವಾದಿಗೆ 1 ನೇ ಪ್ರತಿವಾದಿಯ ಕುಟುಂಬದ ಸಂಪೂರ್ಣ ವ್ಯಯಕ್ತಿಕ ಮಾಹಿತಿ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ.16 ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡುವ ಉದ್ದೇಶ 1 ನೇ ಪ್ರತಿವಾದಿಗೆ ಯಾವತ್ತೂ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಅವಶ್ಯಕತೆಗೆ ಹಣ ಬೇಕಾಗಿದ್ದರಿಂದ 1 ನೇ ಪ್ರತಿವಾದಿಯು 5 ನೇ ಪ್ರತಿವಾದಿಯಿಂದ ಸಾಲ ಪಡೆದು ಭದ್ರತೆಗಾಗಿ ನಿಡಿ-42 ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಒಂದು ವೇಳೆ ಸದರಿ ದಾಖಲೆಯು ನಿಜವಾದ ಕ್ರಯ ಪತ್ರ ಆಗಿದ್ದರೆ 5 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಕುಟುಂಬದ ಎಲ್ಲಾ ಸದಸ್ಯರುಗಳ ಸಮ್ಮತಿ ಮತ್ತು ರುಜುವನ್ನು ಅದಕ್ಕೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನಿಡಿ-42 ದಾಖಲೆಯನ್ನು 5 ನೇ ಪ್ರತಿವಾದಿಗೆ ಕೇವಲ 1 ನೇ

ಪ್ರತಿವಾದಿ ಬರೆದುಕೊಟ್ಟಿರುತ್ತಾರೆ ಹೊರತು 2 ನೇ ಪ್ರತಿವಾದಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ 2 ಮತ್ತು 5 ನೇ ಪ್ರತಿವಾದಿಯರು ಶಾಮೀಲಾಗಿ ನಿಡಿ–42 ದಾಖಲೆಯನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಸ್ವತಃ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ತಿಳಿದು ನಾನು ಮತ್ತು 2 ನೇ ಪ್ರತಿವಾದಿಯು ಶಾಮೀಲಾಗಿ ನಿಡಿ–41 ರಂತೆ ಸುಳ್ಳು ಜಿಪಿಎ ನ್ನು ಸೃಷ್ಟಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಡಿ.ಎನ್.ಪಿ. ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್